UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
22-10-2026
Thursday

ಕೃಷಿ ವಿವಿಗೆ ಐಸಿಎಆರ್ ತಂಡ ಭೇಟಿ, ಪರಿಶೀಲನೆ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯಕ್ಕೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ (ಐಸಿಎಆರ್) ಪೂರ್ವ ಪರಿಶೀಲನಾ ತಂಡ (ಪಿಆರ್‌ಟಿ) ಭೇಟಿ ನೀಡಿ, ವಿಶ್ವವಿದ್ಯಾನಿಲಯದ ಶೈಕ್ಷಣಿಕ, ಸಂಶೋಧನಾ ಹಾಗೂ ವಿಸ್ತರಣಾ ಚಟುವಟಿಕೆಗಳನ್ನು ಪರಿಶೀಲಿಸಿತು.

ವಿಶ್ವವಿದ್ಯಾನಿಲಯವು ಸಲ್ಲಿಸಿದ್ದ ಸ್ವಯಂ ಅಧ್ಯಯನ ವರದಿಯ (ಎಸ್‌ಎಸ್‌ಆರ್) ಆಧಾರದ ಮೇಲೆ ಈ ಭೇಟಿ ನೀಡಿದ್ದು ಐಸಿಎಆರ್‌ನಿಂದ ಐದು ವರ್ಷಕ್ಕೊಮ್ಮೆ ದೊರೆಯುವ ಮಾನ್ಯತೆ ಪಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಮಾನ್ಯತೆಯು ವಿಶ್ವವಿದ್ಯಾನಿಲಯದ ಮುಂದಿನ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ನೆರವು ಹಾಗೂ ಇತರ ಸೌಲಭ್ಯಗಳನ್ನು ಪಡೆಯಲು ಸಹಕಾರಿಯಾಗಲಿದೆ.

Samyuktha Karnataka Pg.03

5.97 lakh farmers in State miss PM-KISAN benefits

Rashmi Patil
BENGALURU

Around 5,97,085 farmers across Karnataka have not received funds under the Pradhan Mantri Kisan Samman Nidhi (PM-KISAN) scheme as they have not completed the e-KYC process and linked their Aadhaar cards to their respective bank accounts.

Under the scheme, it is mandatory for farmers or beneficiaries to own agricultural land, have a unique ID through the Farmer Registration and Unified Beneficiary Information System (FRUITS), complete the eKYC process and link their Aadhaar card to their savings bank or post office account.

PM-KISAN is a Central scheme that provides income support of ₹6,000 per year to eligible landholding farmers.

The e-KYC process is completed on the PM-KISAN portal by uploading the beneficiary's personal details, Aadhaar card, land ownership documents and details of a savings bank or post office account. Farmers must also link their savings accounts with their Aadhaar ID.

According to officials in the Agriculture Department, around 43.3 lakh beneficiaries have completed the e-KYC across the State in the past three years. Of the total 5,97,085 farmers who are not receiving benefits under the scheme, 2,25,691 have not linked their Aadhaar cards, while 3,71,394 have not completed the e-KYC process.



PM-KISAN provides income support of ₹6,000 per year to landholding farmers. FILE PHOTO

What officials say

A senior official said, "More than 46 lakh farmers are eligible under this scheme. We are making efforts to complete the e-KYC process and link Aadhaar cards, as the money is sent directly to their accounts."

The official explained that it is a Centrally funded scheme and the State government cannot do much apart from creating awareness.

A nodal officer has also been appointed in every village to help farmers complete the process. "Similarly, officials in GramaOne centres have been provided credentials to help beneficiaries and farmers can download the PM-KISAN app and complete the process," he said. Steps are being taken by employees of the Indian Post Payments Bank (IPPB) to open Aadhaar-linked bank accounts at post offices.

However, farmers told *The Hindu* that slow servers, non-cooperative officials and cumbersome procedures remained hurdles.

Technical glitches

Manju Gadadi, a farmer from Belagavi district, said, "Many times, the server is slow or crashes, and there is no power at the centres. The officials also keep postponing the process, saying they have other office work to complete."

Mr. Gadadi added that it is mandatory to complete the e-KYC process every year. "The Union government should at least allow e-KYC renewal once every five years," he suggested.

Another farmer, Mallikarjun from Haveri district, said most farmers do not understand the digital process and sought a simpler, single-window process. "Besides, ₹6,000 is given in three instalments, which is not sufficient because a 50-kg bag of manure costs ₹2,400. For one acre of land, we need at least 150 kg," he said.

The Hindu Pg.06


Agrivoltaics on 10% land can meet 2050 power need: Joshi

Saptaparno Ghosh
NEW DELHI

Operationalising just 10% of agricultural land suitable for agrivoltaics in India can generate enough electricity to meet India's projected power demand for 2050, Union Minister for New and Renewable Energy Pralhad Joshi said.

"If even 10% [of the land deemed suitable for agrivoltaics] is converted [towards operationalisation], more than whatever power requirement is being estimated for 2050 can be generated by agrivoltaics," he said, citing a study by The Energy and Resources Institute (TERI).

Published in July, the study identified about 47.5 million hectares, or almost 30% of India's more than 160 million hectare of arable agricultural land, as suitable for agrivoltaics.



Pralhad Joshi

The approach combines agricultural activity with solar photovoltaic power generation on the same land. The government is working on a dedicated policy framework for the sector with agrivoltaics potentially being incorporated into next phase of the Pradhan Mantri Kisan Urja Suraksha evam Utthaan Mahabhiyan (PM-KUSUM).

In his address, Union Agriculture Minister Shivraj Singh Chouhan stressed on the need to address land-use concerns and assess feasibility of projects across different regions.

Cost competitiveness

Mr. Joshi said agrivoltaic installations, which typically need elevated solar panel structures to facilitate farming underneath, could cost 25-30% more than conventional ground-mounted solar projects.

He stressed on the need to bridge the cost differential to make the model commercially viable.

"The average cost of electricity supply was about ₹7/unit in [fiscal] 2025-26. While some of the major agrivoltaics assessment indicate potential generation of ₹3.20-₹3.30/unit whereas ground mounted costs ₹2.5 to 2.6/unit. This difference has to be matched," he said.


The Hindu Pg.13

ಭಾರತದಲ್ಲಿ ಈ ಬಾರಿ 7ನೇ ಅಗ್ರಿವೋಲ್ಟಾಯಿಕ್ಸ್ ವಿಶ್ವ ಸಮ್ಮೇಳನ | ಒಂದೇ ಭೂಮಿಯಲ್ಲಿ ಬೆಳೆ, ಸೌರ ವಿದ್ಯುತ್ ಉತ್ಪಾದಿಸುವ ಯೋಜನೆ

ರೈತರ ಆರ್ಥಿಕತೆಗೆ ಅಗ್ರಿವೋಲ್ಟಾಯಿಕ್ಸ್ ಹೊಸ ಮಾರ್ಗ



ಪ್ರಲ್ಹಾದ್ ಜೋಶಿ
ಕೇಂದ್ರ ಆಹಾರ, ನವೀಕರಿಸಬಹುದಾದ ಇಂಧನ ಸಚಿವ



ಶಿವರಾಜ್ ಸಿಂಗ್ ಚೌಹಾನ್
ಕೇಂದ್ರ ಕೃಷಿ ಸಚಿವ

ವಿಕಸಿತ ಭಾರತದತ್ತ ಸಾಗುವ ನಮ್ಮ ಪಯಣ ಹಳ್ಳಿಗಳ ಸಮೃದ್ಧಿ ಆಧರಿಸಿರಬೇಕು. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಅನ್ನದಾತರನ್ನು ಸಬಲಗೊಳಿಸುವುದೇ ನಮ್ಮ ಉದ್ದೇಶ. 'ಆಗ್ರಿ-ಪಿವಿ' ಎಂದೂ ಕರೆಯಲಾಗುವ ಅಗ್ರಿ ವೋಲ್ಟಾಯಿಕ್ಸ್, ರೈತರು ತಮ್ಮ ಜಮೀನಿನಲ್ಲಿ ಕೃಷಿಯನ್ನು ಮುಂದುವರಿಸುತ್ತಲೇ ಶುದ್ಧ ವಿದ್ಯುತ್ ಉತ್ಪಾದಿಸಲು ಅನುವು ಮಾಡಿಕೊಡುವ ಯೋಜನೆ.

2030 ರವೇಳೆಗೆ 500 ಗಿಗಾವ್ಯಾಟ್ ನವೀಕರಿಸಬಹುದಾದ ಇಂಧನ ಉತ್ಪಾದಿಸುವ ರಾಷ್ಟ್ರೀಯ ಗುರಿಯನ್ನು ಸಾಧಿಸುವತ್ತ ಭಾರತ ಸಾಗುತ್ತಿರುವ ಸಂದರ್ಭದಲ್ಲಿ, ಕೃಷಿ ಕ್ಷೇತ್ರವು ಕೃಷಿ ಭೂಮಿಗಳಲ್ಲಿಯೇ ಸೌರಶಕ್ತಿಯನ್ನು ಬಳಸಿಕೊಳ್ಳುವ ಪ್ರಮುಖ ವೇದಿಕೆಯಾಗಿ ಹೊರಹೊಮ್ಮಿದೆ. ಇದೇ ವೇಳೆ, ಭಾರತ ಸರ್ಕಾರದ ಪಿಎಂ-ಕುಸುಮ್ (ಪ್ರಧಾನಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ) ಯೋಜನೆಯಡಿ ಕೈಗೊಂಡಿರುವ ಯಶಸ್ವಿ ಪ್ರಯತ್ನಗಳು ಈಗಾಗಲೇ ನೀರಾವರಿಯನ್ನು ಸೌರಶಕ್ತಿಗೆ ಪರಿವರ್ತಿಸುವ ಮೂಲಕ ಸ್ಪಷ್ಟವಾಗಿ ಗೋಚರಿಸುತ್ತಿವೆ.

ಇದರಿಂದ ಇಂಗಾಲದ ಹೊರಸೂಸುವಿಕೆ ಕಡಿಮೆಯಾಗುವುದರ ಜೊತೆಗೆ ಪರಿಸರಸ್ನೇಹಿ ಮತ್ತು ಸುಸ್ಥಿರ ಪದ್ಧತಿಗಳಿಗೆ ಉತ್ತೇಜನ ದೊರೆಯುತ್ತಿದೆ. ಇದಲ್ಲದೆ, ಪಿಎಂ-ಕುಸುಮ್ ಯೋಜನೆಯ ಮುಂದಿನ ಹಂತದಲ್ಲಿ ಕೃಷಿ-ದ್ಯುತಿವಿದ್ಯುಜ್ಜನಕ ವ್ಯವಸ್ಥೆಗಳಿಗೆ ಪ್ರತ್ಯೇಕ ಅವಕಾಶ ಕಲ್ಪಿಸುವ ಮೂಲಕ ಸೌರಶಕ್ತಿ ಉತ್ಪಾದನೆಯನ್ನು ತ್ವರಿತಗೊಳಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ದಿಲ್ಲಿಯಲ್ಲಿ ಅಗ್ರಿವೋಲ್ಟಾಯಿಕ್ಸ್ ಸಮ್ಮೇಳನ

ಅಕ್ಟೋಬರ್ 21ರಿಂದ 23ರವರೆಗೆ ನವದೆಹಲಿಯ ಭಾರತ್ ಮಂಟಪದಲ್ಲಿ ಏಳನೇ ಅಗ್ರಿವೋಲ್ಟಾಯಿಕ್ಸ್ ವಿಶ್ವ ಸಮ್ಮೇಳನವನ್ನು ಭಾರತ ಆಯೋಜಿಸಿದೆ. 'ಜಾಗತಿಕ ದಕ್ಷಿಣಕ್ಕೆ ಶಕ್ತಿ ತುಂಬುವುದು' ಎಂಬ ಸಮ್ಮೇಳನದ ವಿಷಯವು ಭಾರತ ವಹಿಸಲು ಸಿದ್ಧವಾಗಿರುವ ಜವಾಬ್ದಾರಿಯನ್ನು ನೇರವಾಗಿ ಪ್ರತಿಬಿಂಬಿಸುತ್ತದೆ. ಕೃಷಿ ನಾವೀನ್ಯತೆ ಮತ್ತು ಇಂಧನ ಪರಿವರ್ತನೆಯ ಪ್ರಯೋಜನಗಳು ಭಾರತದ ಒಟ್ಟು ರೈತರಲ್ಲಿ ಸುಮಾರು ಶೇ. 86ರಷ್ಟಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೂ ತಲುಪಬೇಕು ಎಂಬುದು ನಮ್ಮ ಆಶಯ.

ಉತ್ತಮ ಫಸಲು ಬಂದ ಮಾತ್ರಕ್ಕೆ ಉತ್ತಮ ಆದಾಯ ದೊರೆಯುತ್ತದೆ ಎಂಬ ಖಾತರಿ ಇಲ್ಲ, ಹವಾಮಾನ, ಕೃಷಿ ಪೆಟ್ಟಿಗೆ ಮತ್ತು ಮಾರುಕಟ್ಟೆ ಬೆಲೆಗಳು ಕುಟುಂಬದ ಆರ್ಥಿಕ ಲೆಕ್ಕಾಚಾರವನ್ನು ಏರುಪೇರು ಮಾಡಬಹುದು. ಇಂತಹ ಅನಿಶ್ಚಿತತೆಗಳನ್ನು ಎದುರಿಸುವ ರೈತರ ಸಾಮರ್ಥ್ಯವನ್ನು ಬಲಪಡಿಸಲು ಮತ್ತು ಹೆಚ್ಚುವರಿ ಆದಾಯ ಗಳಿಸುವ ಅವಕಾಶಗಳನ್ನು ಸೃಷ್ಟಿಸಲು ಸಾರ್ವಜನಿಕ ನೀತಿಗಳು ನೆರವಾಗಬೇಕು.

ಕೃಷಿಗೆ ಸೂಕ್ತವಾದ ರಚನೆಗಳು ಮತ್ತು ಅಂತರವ್ಯವಸ್ಥೆಗಳ ಮೂಲಕ ಒಂದೇ ಭೂಮಿಯಲ್ಲಿ ಬೆಳೆ ಬೆಳೆಯುವುದರ ಜೊತೆಗೆ ಸೌರ ವಿದ್ಯುತ್ ಉತ್ಪಾದಿಸುವುದೇ ಅಗ್ರಿವೋಲ್ಟಾಯಿಕ್ಸ್‌ನ ಉದ್ದೇಶ. ಇದರಿಂದ ಕೃಷಿಕರಿಗೆ ವಿದ್ಯುತ್ ಮಾರಾಟದ ಮೂಲಕ ಹೆಚ್ಚುವರಿ ಆದಾಯದ ಮೂಲದೊರೆಯುತ್ತದೆ. ಸೌರಶಕ್ತಿಯು ಡೀಸೆಲ್ ಅಥವಾ ವಿದ್ಯುತ್‌ಗೆ ಪರ್ಯಾಯವಾದಾಗ ವೆಚ್ಚವನ್ನೂ ಕಡಿಮೆ ಮಾಡುತ್ತದೆ. ಅಗ್ರಿವೋಲ್ಟಾಯಿಕ್ಸ್ ವ್ಯವಸ್ಥೆಯಡಿ ಸೃಷ್ಟಿಯಾಗುವ ಅನುಕೂಲಕರ ಸೂಕ್ಷ್ಮ ಹವಾಮಾನವು ಅತಿಯಾದ ಶಾಖ, ಬರ, ತೀವ್ರ ಸೌರ ವಿಕಿರಣ ಮತ್ತು ಆಲಿಕಲ್ಲು ಮಳೆಯ ಪರಿಣಾಮಗಳಿಂದ ಬೆಳೆಗಳಿಗೆ ಹೆಚ್ಚುವರಿ ರಕ್ಷಣೆ ಒದಗಿಸುತ್ತದೆ. ಅಗ್ರಿವೋಲ್ಟಾಯಿಕ್ಸ್ ಮೂಲಕ ಗ್ರಾಮೀಣ ಆರ್ಥಿಕತೆಯ ಇನ್ನಷ್ಟು ವಲಯಗಳಿಗೆ ವಿಸ್ತರಿಸಬಹುದು. ಇದರಲ್ಲಿ ಸೌರ ವ್ಯವಸ್ಥೆಗಳ ಅಳವಡಿಕೆ, ನಿರ್ವಹಣೆ ಮತ್ತು ಕೃಷಿ ಸೇವೆಗಳ ಕ್ಷೇತ್ರಗಳಲ್ಲಿನ ಉದ್ಯೋಗಾವಕಾಶಗಳೂ ಸೇರಿವೆ.

ಬೆಳೆ ಆಯ್ಕೆ ಹೇಗೆ?

ಭಾರತದಲ್ಲಿ, ಅಗ್ರಿವೋಲ್ಟಾಯಿಕ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಅಳವಡಿಸಿಕೊಳ್ಳಲು ಸೂಕ್ತ ಬೆಳೆಗಳ ಆಯ್ಕೆ ಅತ್ಯಗತ್ಯ. ಆದ್ದರಿಂದ, ಬೆಳೆಗಳ ಆಯ್ಕೆಯಲ್ಲಿ ನೆರಳನ್ನು ಸಹಿಸಿಕೊಳ್ಳುವ ಸಾಮರ್ಥ್ಯ, ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ರೂಪರಚನೆಯನ್ನು ಬದಲಾಯಿಸಿಕೊಳ್ಳುವ ಗುಣ ಮತ್ತು ಸೂರ್ಯನ ಬೆಳಕು ಮಧ್ಯಂತರವಾಗಿ ದೊರೆಯುವ ಸಂದರ್ಭದಲ್ಲಿಯೂ ಸ್ಥಿರ ಇಳುವರಿ ನೀಡುವ ಸಾಮರ್ಥ್ಯಕ್ಕೆ ಆದ್ಯತೆ ನೀಡಬೇಕು. ಸಾಲುಗಳ ನಡುವಿನ ಜಾಗವನ್ನು ಬಳಸಿಕೊಂಡು ಬೆಳೆ ಬೆಳೆಯುವುದು ಅತ್ಯಗತ್ಯ.



ಅಗ್ರಿವೋಲ್ಟಾಯಿಕ್ ವಿನ್ಯಾಸಗಳಲ್ಲಿ ಸಾಮಾನ್ಯವಾಗಿ ಬೆಳೆಗಳ ಮೇಲ್ಭಾಗಕ್ಕೆ ತಲುಪುವ ನೈಸರ್ಗಿಕ ಸೂರ್ಯನ ಬೆಳಕಿನ ಶೇ. 70ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣವನ್ನು ಉಳಿಸಿಕೊಳ್ಳುವ ಗುರಿ ಇರಬೇಕು. ಬೆಳಕಿನ ಬದಲಾವಣೆಗಳಿಗೆ ಸೂಕ್ಷ್ಮವಾಗಿರುವ ಬೆಳವಣಿಗೆಯ ಹಂತಗಳಲ್ಲಿ ಹೊಂದಾಣಿಕೆ ಮಾಡಬಹುದಾದ ಸೌರ ಫಲಕಗಳು ಹೆಚ್ಚುವರಿ ನಮ್ಯತೆಯನ್ನು ಒದಗಿಸಬಹುದು.

ಸಮ್ಮೇಳನದಪೂರ್ವಭಾವಿಕಾರ್ಯಕ್ರಮದಲ್ಲಿಪಿಎಂ-ಕುಸುಮ್ ಯೋಜನೆಯ ಮುಂದಿನ ಹಂತವು ಅಗ್ರಿವೋಲ್ಟಾಯಿಕ್ಸ್‌ಗಾಗಿ ಮೀಸಲಾದ ಘಟಕವೊಂದನ್ನು ಹೊಂದಿರುವುದಾಗಿ ಘೋಷಿಸಲಾಯಿತು. ಇದರ ಉದ್ದೇಶ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅವಕಾಶ ದೊರೆಯಬೇಕು. ಹೀಗಾಗಿ, ಅಗ್ರಿವೋಲ್ಟಾಯಿಕ್ಸ್‌ಗೆ ಸೂಕ್ತವಾದ ಸಣ್ಣ ಮತ್ತು ಅತಿ ಸಣ್ಣ ರೈತರ ಗುಂಪುಗಳ ಜಂಟಿ ಅಥವಾ ಸಾಮಾನ್ಯ ಕೃಷಿ ಭೂಮಿಯನ್ನು ಬಳಸಿಕೊಳ್ಳುವ ಸಾಧ್ಯತೆಗಳನ್ನು ನಾವು ಪರಿಶೀಲಿಸಬೇಕಾಗಿದೆ. ಇದಕ್ಕಾಗಿ ರೈತ ಉತ್ಪಾದಕ ಸಂಸ್ಥೆಗಳು (ಎಫ್‌ಪಿಒ), ಸಹಕಾರ ಸಂಘಗಳು ಮತ್ತು ಪಂಚಾಯತ್‌ಗಳನ್ನು ಸಜ್ಜುಗೊಳಿಸಬಲಗೊಳಿಸಬೇಕು. ಈ ಉದ್ದೇಶವನ್ನು ಕಾರ್ಯಸಾಧ್ಯಯೋಜನೆಗಳಾಗಿ ಪರಿವರ್ತಿಸಲು ಕೈಗಟುಕುವ ಹಣಕಾಸು ನೆರವು, ಸೂಕ್ತ ವಿದ್ಯುತ್ ಸಂಪರ್ಕ ವ್ಯವಸ್ಥೆಗಳು ಮತ್ತು ವಿದ್ಯುತ್ ಮಾರಾಟಕ್ಕೆ ವಿಶ್ವಾಸಾರ್ಹ ಪಾವತಿ ವ್ಯವಸ್ಥೆಗಳು ಅಗತ್ಯವಿದೆ.

ಕೃಷಿ ಮುಂದುವರಿಯುವುದು ಈ ವಿಶ್ವಾಸಕ್ಕೆ ಅತ್ಯಗತ್ಯ. ಅಗ್ರಿವೋಲ್ಟಾಯಿಕ್ ಯೋಜನೆ ಎಂದು ಹೇಳಿಕೊಳ್ಳುವ ಯಾವುದೇ ಯೋಜನೆಯು ಕೃಷಿಯನ್ನು ಸುಸ್ಥಿರವಾಗಿಡಬೇಕು. ಕೃಷಿ ಚಟುವಟಿಕೆಗಳಿಗೆ ಅಡ್ಡಿಯಾಗದಂತೆ ರಚನೆಗಳನ್ನು ವಿನ್ಯಾಸಗೊಳಿಸಬೇಕು. ಸೌರ ಫಲಕಗಳ ಆಯ್ಕೆ ಮತ್ತು ಅವುಗಳ ನಡುವಿನ ಅಂತರವು ಬೆಳೆಗಳ ಅಗತ್ಯಗಳಿಗೆ ಅನುಗುಣವಾಗಿರಬೇಕು. ಬೆಳೆಗಳ ನಡುವಿನ ಅಂತರದಲ್ಲಿ ಕೈಗೊಳ್ಳುವ ಕೃಷಿ ಕಾರ್ಯಗಳಿಗೆ ಕಡಿಮೆ ತೊಂದರೆ ಜಾಗ ಸಾಕಾಗುವಂತಹ ಸುಧಾರಿತ ಮತ್ತು ಸಣ್ಣ ಕೃಷಿ ಯಂತ್ರೋಪಕರಣಗಳನ್ನು ಬಳಸುವ ಮೂಲಕ ಅನುಕೂಲ ಕಲ್ಪಿಸಬೇಕು. ವೈಜ್ಞಾನಿಕ ಅಧ್ಯಯನಗಳ ಪ್ರಕಾರ, ಸೂಕ್ತವಾಗಿ ವಿನ್ಯಾಸಗೊಳಿಸಿದ ನೆರಳು ಕೆಲವು ಬೆಳೆಗಳು ಶಾಖ ಮತ್ತು ನೀರಿನ ಕೊರತೆಯ ಒತ್ತಡವನ್ನು ಎದುರಿಸಲು ನೆರವಾಗುತ್ತದೆ.

ಅಭಿವೃದ್ಧಿಗೆ ಹಲವು ಸಂಸ್ಥೆಗಳು

ಭಾರತದಲ್ಲಿಈ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಈಗಾಗಲೇ ಅಮೂಲ್ಯ ಅನುಭವಗಳಿವೆ. ಜೋಧಪುರದಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಸೆಂಟ್ರಲ್ ಅರಿಡ್ ಝೋನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸೌರ ವಿದ್ಯುತ್ ಉತ್ಪಾದನೆ ಮತ್ತು ಮಳೆನೀರು ಕೊಯ್ಲಿನ ಜೊತೆಗೆ ಕೃಷಿ ಮಾಡುವ ಸಾಧ್ಯತೆಗಳನ್ನು ಪರಿಶೀಲಿಸಿದೆ. ಪುಣೆಯಲ್ಲಿರುವ ಬಿಎಐಎಫ್‌ನ ರೂರಲ್ ಇನ್ನೋವೇಶನ್ ಸೆಂಟರ್‌ವಿವಿಧ ಬೆಳೆಗಳಲ್ಲಿ ವಿಭಿನ್ನ ವಿನ್ಯಾಸಗಳನ್ನು ಪರೀಕ್ಷಿಸುತ್ತಿದೆ. ಭಾರತ ಸರ್ಕಾರವು 2025ರಲ್ಲಿ ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಆವರಣದಲ್ಲಿ 100 ಕಿಲೋವ್ಯಾಟ್ ಸಾಮರ್ಥ್ಯದ ಅಗ್ರಿ-ಫೋಟೋವೋಲ್ಟಾಯಿಕ್ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅಗ್ರಿವೋಲ್ಟಾಯಿಕ್ ಕ್ಷೇತ್ರದಲ್ಲಿ ರಾಷ್ಟ್ರೀಯ ಮಟ್ಟದ ಸಂಶೋಧನಾ ಕಾರ್ಯಕ್ರಮವನ್ನು ಆರಂಭಿಸುವ ಉಪಕ್ರಮ ಕೈಗೊಂಡಿದೆ. ಈ ಉತ್ಕೃಷ್ಟತಾ ಕೇಂದ್ರವು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಮಾರ್ಗದರ್ಶನದಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ರಾಷ್ಟ್ರೀಯ ಸೌರಶಕ್ತಿ ಸಂಸ್ಥೆ (ಎನ್‌ಐಎಸ್‌ಇ) ಜಂಟಿ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ ಕೇಂದ್ರವು ಸೂಕ್ತ ಬೆಳೆಗಳು ಮತ್ತು ಸೌರ ಫಲಕಗಳ ಅತ್ಯುತ್ತಮ ಸಂಯೋಜನೆಯನ್ನು ಗುರುತಿಸಲು, ಇಳುವರಿ ನಷ್ಟವನ್ನು ಕನಿಷ್ಠ ಮಟ್ಟದಲ್ಲಿರುವ ಬೆಳೆಗಳ ಪಟ್ಟಿಯನ್ನು ರೂಪಿಸಲು ಹಾಗೂ ಅಗ್ರಿವೋಲ್ಟಾಯಿಕ್ಸ್ ವ್ಯವಸ್ಥೆಗೆ ಹೊಂದಿಕೊಳ್ಳುವ ಬೆಳೆ ತಳಗಳನ್ನು ಅಭಿವೃದ್ಧಿಪಡಿಸಲು ಸಂಶೋಧನಾ ಅಧ್ಯಯನಗಳನ್ನು ನಡೆಸುತ್ತಿದೆ. ಈ ಸಂಶೋಧನಾ ಪ್ರಯೋಗಗಳಲ್ಲಿ ಹೂಕೋಸು, ಮೂಲಂಗಿ, ಪಡವಲಕಾಯಿ, ಪಾಲಕ್ ಸೊಪ್ಪು, ಸೋರೇಕಾಯಿ ಮತ್ತು ಕುಂಬಳಕಾಯಿ ಸೇರಿದಂತೆ ವಿವಿಧ ತರಕಾರಿಗಳನ್ನು ಬಳಸಲಾಗುತ್ತಿದೆ. ಮುಂದಿನ ಎರಡು ವರ್ಷಗಳಲ್ಲಿ ಈ ಉತ್ಕೃಷ್ಟತಾ ಕೇಂದ್ರದಿಂದ ಸಂಗ್ರಹವಾಗುವ ದತ್ತಾಂಶವು ಭಾರತದ ಪ್ರಮುಖ ಸಂಭಾವ್ಯ ಪ್ರದೇಶಗಳಲ್ಲಿಯಾವಬೆಳೆಗಳು ಸೂಕ್ತವಾಗಿವೆ, ಯಾವಪರಿಸ್ಥಿತಿಗಳನ್ನು ಪಾಲಿಸಬೇಕು ಮತ್ತು ಕೃಷಿ ಭೂಮಿ ಹಾಗೂ ಸೌರ ಫಲಕಗಳನ್ನು ಹೇಗೆ ಆತ್ಯುತ್ತಮವಾಗಿ ಸಂಯೋಜಿಸಬೇಕು ಎಂಬುದರ ಕುರಿತು ತಾಂತ್ರಿಕ ಸಲಹೆಗಳನ್ನು ನೀಡಲು ನೆರವಾಗಲಿದೆ.

ವಿಶ್ವ ಸಮ್ಮೇಳನವನ್ನು ಆಯೋಜಿಸುವುದರಿಂದ ಈ ರಾಷ್ಟ್ರೀಯ ಪ್ರಯತ್ನದಲ್ಲಿ ಅಂತಾರಾಷ್ಟ್ರೀಯ ವಿಜ್ಞಾನ ಸಮುದಾಯವೂ ಪಾಲ್ಗೊಳ್ಳಲು ಅವಕಾಶ ದೊರೆಯುತ್ತದೆ. ಮೊದಲ ಎರಡು ಆವೃತ್ತಿಗಳನ್ನು 2020 ಮತ್ತು 2021ರಲ್ಲಿ ಆನ್‌ಲೈನ್ ಮೂಲಕ ನಡೆಸಲಾಗಿತ್ತು. ನಂತರ ಇಟಲಿಯ ಪಿಯಾಚೆನ್ಸಾ, ದಕ್ಷಿಣ ಕೊರಿಯಾದ ಡೇಗು, ಅಮೆರಿಕದ ಡೆನ್ವರ್ ಮತ್ತು ಜರ್ಮನಿಯ ಫ್ರೈಬರ್ಗ್‌ನಲ್ಲಿ ಸಮ್ಮೇಳನಗಳು ನಡೆದಿವೆ.

ಜಾಗತಿಕವಾಗಿಯೂ ಭಾಪು

ಜಾಗತಿಕ ದಕ್ಷಿಣದ ದೇಶಗಳೊಂದಿಗಿನ ಭಾರತದ ಸಹಭಾಗಿತ್ವವನ್ನು ಮತ್ತಷ್ಟು ಗಾಢಗೊಳಿಸಲು ಇದೊಂದು ಅವಕಾಶವೂ ಹೌದು. ಭಾರತ ಮತ್ತು ಫ್ರಾನ್ಸ್ ಜಂಟಿಯಾಗಿ ಆರಂಭಿಸಿದ ಅಂತಾರಾಷ್ಟ್ರೀಯ ಸೌರ ಒಕ್ಕೂಟವು ಸೌರಶಕ್ತಿ ಕ್ಷೇತ್ರದಲ್ಲಿ ಸಹಕಾರಕ್ಕೆ ಈಗಾಗಲೇ ಭದ್ರ ಬುನಾದಿಯನ್ನು ಒದಗಿಸಿದೆ. ಅಗ್ರಿವೋಲ್ಟಾಯಿಕ್ಸ್ ಮೂಲಕ ಜಂಟಿ ಕ್ಷೇತ್ರ ಸಂಶೋಧನೆ, ತರಬೇತಿ ಮತ್ತು ಪ್ರಾಯೋಗಿಕ ಅನುಭವಗಳ ವಿನಿಮಯಕ್ಕೆ ಮತ್ತಷ್ಟು ಅವಕಾಶಗಳು ಸೃಷ್ಟಿಯಾಗುತ್ತವೆ.

ಆಭವೃದ್ಧಿಯ ಪ್ರಯೋಜನಯಾರಿಗೆದೊರೆಯುತ್ತದೆಎಂಬುದರ ಮೇಲೆ ಅಗ್ರಿವೋಲ್ಟಾಯಿಕ್ಸ್‌ನ ರಾಜಕೀಯ ಮಹತ್ವ ನಿಂತಿದೆ. ಇಂಧನ ಭದ್ರತೆಯ ಹೆಚ್ಚಳವು ಗ್ರಾಮೀಣ ಜೀವನೋಪಾಯವನ್ನು ಬಲಪಡಿಸಬೇಕು. ಶುದ್ಧ ತಂತ್ರಜ್ಞಾನದಲ್ಲಿನ ಹೂಡಿಕೆಗಳು ಕೃಷಿಕರು ಮತ್ತು ಗ್ರಾಮೀಣ ಯುವಜನರಿಗೆ ಅವಕಾಶಗಳನ್ನು ಸೃಷ್ಟಿಸಬೇಕು. ವಿಕೇಂದ್ರೀಕೃತ ಅಗ್ರಿವೋಲ್ಟಾಯಿಕ್ ವ್ಯವಸ್ಥೆಗಳು ಮತ್ತು ಪಿಎಂ-ಕುಸುಮ್ ಯೋಜನೆಯ ಮುಂದಿನ ಹಂತವು ಡೀಸೆಲ್ ಹಾಗೂ ಗ್ರಿಡ್ ವಿದ್ಯುತ್ ವೆಚ್ಚದ ಮೇಲಿನ ದೇಶದ ಅವಲಂಬನೆ ಮತ್ತು ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ಅಪಾರ ಸಾಮರ್ಥ್ಯ ಹೊಂದಿವೆ. ನವದೆಹಲಿಗೆ ವಿಶ್ವದ ಪ್ರತಿನಿಧಿಗಳನ್ನು ಸ್ವಾಗತಿಸುವ ಈ ಸಂದರ್ಭದಲ್ಲಿನಮ್ಮ ನಿರೀಕ್ಷೆ ಪ್ರಾಯೋಗಿಕ ಫಲಿತಾಂಶಗಳ ಮೇಲಿದೆ. ಈ ಚರ್ಚೆಗಳು ಉತ್ತಮವಾಗಿ ಪರೀಕ್ಷಿಸಲ್ಪಟ್ಟ ಯೋಜನೆಗಳು, ಜ್ಞಾನ ಹಂಚಿಕೊಳ್ಳುವ ಸಹಭಾಗಿತ್ವಗಳು ಮತ್ತು ರೈತರು ವಿಶ್ವಾಸಪಡಿಸಬಹುದಾದ ವ್ಯವಹಾರ ವ್ಯವಸ್ಥೆಗಳನ್ನು ರೂಪಿಸಲು ನೆರವಾಗಬೇಕು. ಸಣ್ಣ ರೈತರು ಸಮೃದ್ಧಿಯ ಹೊಸ ಮೂಲಗಳಲ್ಲಿ ಪಾಲ್ಗೊಳ್ಳುವ ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಪಡೆದಾಗ ಮಾತ್ರ ವಿಕಸಿತ ಭಾರತದ ಗುರಿಯತ್ತ ನಮ್ಮ ಪಯಣ ಮತ್ತಷ್ಟು ವೇಗ ಪಡೆಯುತ್ತದೆ. ಕೃಷಿಯನ್ನು ತಳಹದಿಯಾಗಿ ಮತ್ತು ಅನ್ನದಾತರನ್ನು ಕೇಂದ್ರಸ್ಥಾನದಲ್ಲಿ ಇರಿಸಿಕೊಂಡು ಅಗ್ರಿವೋಲ್ಟಾಯಿಕ್ಸ್ ಈ ಗುರಿ ಸಾಧನೆಗೆ ಕೊಡುಗೆ ನೀಡಬಲ್ಲದು.

Kannada Prabha Pg.06

ನಿತ್ಯ ಸುಮಾರು 50 ಟನ್ ಗೂಡು ಮಾರಾಟ | ನೆರೆ ರಾಜ್ಯಗಳ ರೈತರೂ ಅವಲಂಬಿಸಿರುವ ಮಾರುಕಟ್ಟೆ

ಮೊದಲು ರೇಷ್ಮೆ ಗೂಡು ತರುವ ರೈತನಿಗೆ ಆದ್ಯತೆ

▪ ಪಿ.ವೈ.ರವಿಂದ್ರ ಹೇರ್ಳೆ

ಸಂ.ಕ.ಸಮಾಚಾರ, ರಾಮನಗರ

ಏಷ್ಯಾದಲ್ಲೇ ಪ್ರಸಿದ್ಧಿ ಹೊಂದಿರುವ ರಾಮನಗರದ ಸರ್ಕಾರಿ ರೇಷ್ಮೆ ಮಾರುಕಟ್ಟೆಯಲ್ಲಿ ರೇಷ್ಮೆ ಹರಾಜು ಪ್ರಕ್ರಿಯೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಮೊದಲು ಗೂಡು ತರುವ ರೈತನಿಗೆ ಮೊದಲ ಆದ್ಯತೆ ನೀಡುತ್ತಿದ್ದಾರೆ. ಇದರಿಂದ ದೂರದ ಊರುಗಳಿಂದ ತಡರಾತ್ರಿ ಮಾರುಕಟ್ಟೆಗೆ ಆಗಮಿಸುವ ರೈತರಿಗೆ ಅನುಕೂಲವಾಗಲಿದೆ.

ಇಲ್ಲಿ ನಿತ್ಯ ಸರಾಸರಿ 500 ರಿಂದ 600 ಲಾಟ್‌ಗಳಲ್ಲಿ ಸುಮಾರು 50 ಟನ್ ಗೂಡು ಮಾರಾಟವಾಗುತ್ತದೆ. ರಾಮನಗರ, ಮಂಡ್ಯ ಮೈಸೂರು, ಚಾಮರಾಜನಗರ, ಹಾಸನ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಸೇರಿದಂತೆ ಉತ್ತರ ಕರ್ನಾಟಕದ ಬೆಳಗಾವಿ, ಹಾವೇರಿ, ಕಲಬುರಗಿ ಹಾಗೂ ಬಳ್ಳಾರಿ ಜಿಲ್ಲೆಗಳಿಂದಲೂ ರೈತರು ಗೂಡು ಮಾರಾಟಕ್ಕೆ ಆಗಮಿಸುತ್ತಾರೆ. ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ರೈತರೂ ರಾಮನಗರ ಮಾರುಕಟ್ಟೆಯನ್ನೇ ಅವಲಂಬಿಸಿದ್ದಾರೆ.



ದೂರದ ರೈತರಿಗೆ ತೊಂದರೆ: ಸ್ಥಳೀಯ ರೈತರು ಹರಾಜು ಆರಂಭಕ್ಕೂ ಮುನ್ನವೇ ಗೂಡನ್ನು ಮಾರುಕಟ್ಟೆಗೆ ತರುತ್ತಾರೆ. ಆದರೆ ದೂರದ ಊರುಗಳಿಂದ ಬರುವ ರೈತರು ತಡರಾತ್ರಿ ಮಾರುಕಟ್ಟೆ ತಲುಪುತ್ತಾರೆ. ಈ ವೇಳೆ ಗೂಡಿನ ಲಾಟ್‌ಗಳನ್ನು ಹಾಕಲು ಅಗತ್ಯವಾದ ಹರಾಜು ಜಾಲರಿಗಳು ಲಭ್ಯವಾಗದೆ ಅವರು ತೊಂದರೆ ಅನುಭವಿಸುತ್ತಿದ್ದರು. ಬೆಳಗ್ಗೆ ಅಧಿಕಾರಿಗಳು

> ಹರಾಜು ಪ್ರಕ್ರಿಯೆಯಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತರಲಾಗುತ್ತಿದೆ. ಜಾಲರಿಗಳನ್ನು ಕಾಯ್ದಿರಿಸುವುದನ್ನು ನಿಷೇಧಿಸಲಾಗಿದ್ದು, ರೈತರು ಇದಕ್ಕೆ ಸಹಕಾರ ನೀಡಬೇಕು. ದೂರದ ಊರುಗಳಿಂದ ಬರುವ ರೈತರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸುವುದು ನಮ್ಮ ಉದ್ದೇಶ. ಸೂತನ ಹೈಟೆಕ್ ರೇಷ್ಮೆ ಮಾರುಕಟ್ಟೆ ಆರಂಭವಾದರೆ ಇಂತಹ ಸಮಸ್ಯೆಗಳು ದೂರವಾಗಲಿವೆ.
> ▪ ರವಿ
> ಸದಸ್ಯರು, ಮಾರುಕಟ್ಟೆ ಸಲಹಾ ಸಮಿತಿ, ರಾಮನಗರ.

ಬಂದು ಜಾಗ ವ್ಯವಸ್ಥೆ ಮಾಡುವವರ